ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 16–1–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಟೇಬಲ್ ಟಾಪ್ ಕ್ಯಾಲೆಂಡರ್ ಬಿಡುಗಡೆ:<br>ಶ್ರೀ ಆರ್. ರೋಷನ್ ಬೇಗ್<br>ಮೂಲ ಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಸಚಿವರಿಂದ | 17–1–2015<br>ಶನಿವಾರ<br>ಬೆಳಗ್ಗೆ<br>11–00 ಗಂಟೆಗೆ | ಕೊಠಡಿ ಸಂಖ್ಯೆ 38,<br>ವಿಕಾಸ ಸೌಧ,<br>ಬೆಂಗಳೂರು |
| 2 | ಅಗ್ರಿ ಡೈರಿ 2015 ಬಿಡುಗಡೆ:<br>ಉದ್ಘಾಟನೆ ಮತ್ತು ಡೈರಿ ಬಿಡುಗಡೆ:<br>ಶ್ರೀ ಕೃಷ್ಣಭೈರೇಗೌಡ<br>ಕೃಷಿ ಸಚಿವರು<br><br>ಮುಖ್ಯ ಅತಿಥಿಗಳು:<br><br>ಶ್ರೀ ಭರತ್ ಲಾಲ್ ಮೀನಾ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಕೃಷಿ ಇಲಾಖೆ | 17–1–2015<br>ಶನಿವಾರ<br>ಬೆಳಗ್ಗೆ<br>11–30 ಗಂಟೆಗೆ | ಸಂಭ್ರಮ ಸಭಾಂಗಣ,<br>ಕೃಷಿ ಇಲಾಖೆ, ಶೇಷಾದ್ರಿ ರಸ್ತೆ,<br>ಬೆಂಗಳೂರು |
| 3 | ಮನೆಯಂಗಳದಲ್ಲಿ ಮಾತುಕತೆ<br><br>ತಿಂಗಳ ಅತಿಥಿ:<br>ಡಾ|| ಟಿ.ವಿ.ವೆಂಕಟಾಚಲಶಾಸ್ತ್ರಿ<br>ಹಿರಿಯ ಸಾಹಿತಿಗಳು ಹಾಗೂ ಸಂಶೋಧಕರು | 17–1–2015<br>ಶನಿವಾರ<br>ಸಂಜೆ<br>4.00 ಗಂಟೆಗೆ | ನಯನ ಸಭಾಂಗಣ, ಕನ್ನಡ ಭವನ,<br>ಜೆ.ಸಿ.ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ವಾರ್ತಾ ಸಚಿವರಿಂದ ಠಾಕೂರ್ ನಿಧನಕ್ಕೆ  ಸಂತಾಪ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಕರ್ನಾಟಕದ ಮಾಜಿ ರಾಜ್ಯಪಾಲ ರಾಮೇಶ್ವರ ಠಾಕೂರ್  ಅವರ ನಿಧನಕ್ಕೆ  ಮೂಲ ಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು  ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಇಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ದಿನಾಂಕ 13-11-2013 ರಂದು ಅರ್ಜಿಯನ್ನು ಆಹ್ವಾನಿಸಲಾಗಿತ್ತು.  ಇದಕ್ಕೆ ಪುರಕವಾಗಿ ವಿವಿಧ ಪದವೃಂದಗಳಿಗೆ  ಅನ್ವಯಿಸುವಂತೆ ಶ್ರೇಯಾಂಕವನ್ನಾಧರಿಸಿ ತಯಾರಿಸಲಾಗಿರುವ  ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ  ನೊಂದಣಿ ಕಚೇರಿ, ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು -560 024 ಇಲ್ಲಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.  ಆಕ್ಷೇಪಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು ಸೂಕ್ತ ಕಾರಣಗಳು ಹಾಗೂ ಪೂರ್ಣ ಪುರಾವೆ/ಮಾಹಿತಿಯೊಂದಿಗೆ  ಜನವರಿ 31-1-2015  ರ ಒಳಗಾಗಿ ಖುದ್ದಾಗಿ ವ್ಯವಸ್ಥಾಪಕರು(ಆಡಳಿತ) ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು -24 ಇಲ್ಲಿಗೆ ಸಲ್ಲಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## Meet the  top tax officials

Bangalore, January 16 (Karnataka Information)

In line with the objective of the government to ensure good governance the Cental Board of Excise and Customs has decided to dedicate every Wednesday of the week to a tax payer friendly programe, where the Taxpayers  may meet any senior official of the department without any prior appointment  and take up any issue or grievance for resolution.

## ತಾರಾಲಯದಲ್ಲಿ "ದಿ ಮೂನ್' ಚಲನಚಿತ್ರ ಪ್ರದರ್ಶನ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಜವಾಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು ಹಾಗೂ ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್  ಸಂಸ್ಥೆ  55 ನಿಮಿಷಗಳ ಅವಧಿಯ "ದಿ ಮೂನ್" ಚಲನಚಿತ್ರವನ್ನು ಜವಾಹರ್‌ಲಾಲ್ ನೆಹರು

ತಾರಾಲಯ ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್ ಬೆಂಗಳೂರು –560 001 ಇಲ್ಲಿ ಜನವರಿ 18 ರಂದು (ಭಾನುವಾರ) ಸಂಜೆ 6.00 ಗಂಟೆಗೆ ಏರ್ಪಡಿಸಿದೆ. ಹೆಚ್ಚಿನ ಮಾಹಿತಿಗೆ 2237 9725, 2226 6084 ಅಥವಾ **http://www.taralaya.org/month-movie.php** ನ್ನು ಸಂಪರ್ಕಿಸಬಹುದಾಗಿದೆ.

## ಚನ್ನಪಟ್ಟಣದ ಆಟಿಕೆಗಳ ಕ್ಯಾಲೆಂಡರ್ ಬಿಡುಗಡೆ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಜನವರಿ 26 ರಂದು ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಈ ಬಾರಿ "ಚನ್ನಪಟ್ಟಣದ ಆಟಿಕೆಗಳು" ವಿಷಯಾಧರಿತ ಸ್ತಬ್ಧಚಿತ್ರವನ್ನು ಪ್ರಸ್ತುತಪಡಿಸುತ್ತಿದೆ. ಸ್ತಬ್ಧಚಿತ್ರದ ಪರಿಕಲ್ಪನೆ ಹಾಗೂ ನಿರ್ಮಾಣ ಕಾರ್ಯವನ್ನು ಇಲಾಖೆಯು ಕೈಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಚೆನ್ನಪಟ್ಟಣದ ಗೊಂಬೆ ಕಲೆ ಆಧರಿಸಿ ಇಲಾಖೆಯು ಆಕರ್ಷಕವಾದ ಟೇಬಲ್ ಟಾಪ್ ಕ್ಯಾಲೆಂಡರ್‌ನ್ನು ಸಿದ್ಧಪಡಿಸಿದ್ದು, ಜನವರಿ 17 ರಂದು ಬೆಳಗ್ಗೆ 11–00 ಗಂಟೆಗೆ ವಿಕಾಸ ಸೌಧದ ಕೊಠಡಿ ಸಂಖ್ಯೆ 38 ರಲ್ಲಿ ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಬಿಡುಗಡೆ ಮಾಡಲಿದ್ದಾರೆ.